ನೀರು, ತಿನ್ನಲು ನೈವೇದ್ಯವನ್ನೂ ಕೊಡದೆ 'ಅವನನ್ನು' ಶಿಕ್ಷಿಸುತ್ತಾರೆ. ಹಸಿದು ಬಾಯಾರಿ ಸ್ನಾನವೂ ಇಲ್ಲದೆ ವಾಸನೆ ಹೊಡೆಯುವ ದೇವರ ಮುಂದೆ ಇವರ ಭಜನೆ ಮಾತ್ರ ನಿತ್ಯದಂತೆ ನಡೆಯುತ್ತದೆ. ತಮ್ಮ ಸದ್ಯದ ಹೀನಾಯ ಗತಿ ದೇವರಿಗೂ ಬಂದರೆ ಮಾತ್ರ ಅವನು ಕರಗುತ್ತಾನೆ ಎಂಬುದು ಅವರ ನಂಬಿಕೆ. ಭಕ್ತ ಮತ್ತು ಭಗವಂತರ ನಡುವಿನ ಸಂಕೀರ್ಣ ಸಂಬಂಧವನ್ನು ಅವಲೋಕಿಸುವುದು ಅತ್ಯಂತ ಕಷ್ಟ. ಸನಾತನ ಧರ್ಮದಲ್ಲಿಯಂತೂ ದೇವರನ್ನೇ ಶಪಿಸುವ ಶಕ್ತಿಯನ್ನು ಭಕ್ತರು ಪಡೆದುಕೊಂಡಿದ್ದಾರೆ. ತ್ರಿಮೂರ್ತಿಗಳೂ ಭಕ್ತರ ಶಾಪದಿಂದ ತಪ್ಪಿಸಿಕೊಂಡಿಲ್ಲ. ಭಕ್ತರಿಗೆ ಸಿಟ್ಟು ಬಂದಾಗ ಅಥವಾ ಹತಾಶರಾದಾಗ ಮನೆ ದೇವರನ್ನೂ ಬದಲಾಯಿಸಿಕೊಳ್ಳುವ ಅರ್ಹತೆ ಪಡೆದಿರುತ್ತಾರೆ. ನನ್ನ ಹಿರಿಯ ಸಾಹಿತಿ ಮಿತ್ರರೊಮ್ಮೆ ತಮ್ಮ ಮನೆತನದ ವಿಶೇಷ ಕತೆಯೊಂದನ್ನು ನನ್ನೊಡನೆ ಹಂಚಿಕೊಂಡಿದ್ದರು. ಕೆಲವು ತಲೆಮಾರುಗಳ ಹಿಂದೆ ತಿರುಪತಿ ತಿಮ್ಮಪ್ಪ ಅವರ ಮನೆ ದೇವರಾಗಿದ್ದನಂತೆ. ಒಮ್ಮೆ ಅವರ ಹಿರಿಯರು ಮನೆಯವರೆಲ್ಲಾ ಸೇರಿಕೊಂಡು ತಿರುಪತಿ ತಿಮ್ಮಪ್ಪ ದೇವರ ದರ್ಶನಕ್ಕೆ ಹೋಗಿದ್ದರಂತೆ. ಅವರು ವಾಪಾಸು ಬರುವ ವೇಳೆಗೆ ಮನೆಯಲ್ಲಿ ದೊಡ್ಡ ಕಳ್ಳತನವಾಗಿ ಬೆಳ್ಳಿ-ಬಂಗಾರಗಳೆಲ್ಲವನ್ನೂ ಕಳ್ಳರು ದೋಚಿದ್ದರಂತೆ. 'ಅವನ ದರ್ಶನಕ್ಕೆಂದೇ ಹೋಗಿದ್ದು ತಿಳಿದಿದ್ದರೂ ನಮ್ಮ ಮನೆಯನ್ನು ಕಾಯದವನು ನಮ್ಮ ಮನೆತನದ ದೇವರಾಗಲು ಸಾಧ್ಯವಿಲ್ಲ' ಎಂದು ನಿರ್ಧರಿಸಿದ ಅವರ ಹಿರಿಯರು, ತಕ್ಷಣ ತಮ್ಮ ಮನೆದೇವರನ್ನು ಶ್ರೀಶೈಲದ ಮಲ್ಲಿಕಾರ್ಜುನನಾಗಿ ಬದಲಾಯಿಸಿಕೊಂಡರಂತೆ. 'ಈಗ ಮಲ್ಲಿಕಾರ್ಜುನ ತನ್ನ ಮಾನ ಉಳಿಸಿಕೊಳ್ಳೋದಕ್ಕೆ ಹೊಡೆದಾಡಿ ಸುಸ್ತಾಗಿದಾನೆ' ಎಂದು ಅವರು ನಗುತ್ತಾ ಹೇಳಿದ್ದರು. ಭಕ್ತರ ಸಹವಾಸ ನಿಭಾಯಿಸುವುದು ಆ ದೇವರಿಗೂ ಸುಲಭವಲ್ಲ.

ಕೆಲವೊಂದು ಬಗೆಯ ಆತ್ಮಹತ್ಯೆ ಪ್ರಕರಣಗಳಲ್ಲಿ ಈ 'ದೇಹ ದಂಡಿಸುವ...' ಮನೋಭಾವ ಕಂಡು ಬರುತ್ತದೆ. 'ಇಂತಹವರೇ ನನ್ನ ಸಾವಿಗೆ ಕಾರಣ' ಎಂದು ಬರೆದಿಟ್ಟು ಸಾಯುವವರ ಸುದ್ದಿಗಳನ್ನು ನಾವು ಪತ್ರಿಕೆಗಳಲ್ಲಿ ಓದುತ್ತೇವೆ. ಈ ಬಗೆಯ ಆತ್ಮಹತ್ಯೆಗಳು ಖಿನ್ನತೆಯ ಕಾರಣಕ್ಕಿಂತಲೂ, ಹಟದ ಕಾರಣಕ್ಕೆ ಜರುಗಿರುತ್ತವೆ. ತನ್ನ ಪವಿತ್ರವಾದ ಜೀವವನ್ನು ಅಂತ್ಯಗೊಳಿಸಿದರೂ ಅಡ್ಡಿಯಿಲ್ಲ, ತನ್ನನ್ನು ಕಾಡಿದ ವ್ಯಕ್ತಿ ನೋವಿಗೆ ಒಳಗಾಗಬೇಕು ಎನ್ನುವ ಹಟ ಇಲ್ಲಿ ವ್ಯಕ್ತವಾಗಿರುತ್ತದೆ. ಇಂತಹ ಜೀವವಿರೋಧಿ ಹಟ ಸಾಧುವಾದದ್ದೆ.. ಎನ್ನುವ ಪ್ರಶ್ನೆ ಏಳುತ್ತದೆ. ಸತ್ತ ವ್ಯಕ್ತಿ ಸಾಧಿಸಿದ್ದಾದರೂ ಏನು ಎಂಬ ಅನುಮಾನ ಮೂಡುತ್ತದೆ. ಕೆಲವೊಮ್ಮೆ ಈ ಆತ್ಮಹತ್ಯೆಯೆಂಬ ಹೆದರಿಕೆಯ ಆಯುಧವನ್ನು ಝಳಪಿಸಿ ತಮ್ಮ ಇಚ್ಛೆಯನ್ನು ನೆರವೇರಿಸಿಕೊಳ್ಳುವವರೂ ಕಂಡು ಬರುತ್ತಾರೆ. ಇತ್ತೀಚೆಗೆ ಅಂತಹ ಪ್ರಸಂಗವೊಂದನ್ನು ನಾನು ಆಪ್ತಸಮಾಲೋಚನೆಯಲ್ಲಿ ಎದುರಿಸಿದೆ. ಆ ಹುಡಗ ತಾನು ಗೇ ಎನ್ನುವುದನ್ನು ತಂದೆ-ತಾಯಿಗೆ ಇನ್ನೂ ಹೇಳಿಕೊಂಡಿಲಿಲ್ಲ. ಅವನಿಗೆ ಆ ಧೈರ್ಯ ಇನ್ನೂ ಬಂದಿರಲಿಲ್ಲ. ಅದರ ಬದಲು ಈಗಲೇ ನನಗೆ ಮದುವೆಯಾಗುವ ಮನಸ್ಸಿಲ್ಲ ಎಂದು ಮದುವೆ ಮುಂದೂಡುತ್ತಲೇ ಬಂದಿದ್ದ. ಆಗಲೇ ವಯಸ್ಸು 29 ದಾಟಿದೆಯಾದ್ದರಿಂದ ಸಹಜವಾಗಿಯೇ ಅಪ್ಪ-ಅಮ್ಮನಿಗೆ ಆತಂಕ ಶುರುವಾಗಿದೆ. ಈ ಹುಡುಗ ಗೇ ಬದುಕನ್ನು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದ. ಯಾವ ಕಾರಣಕ್ಕೂ ತನ್ನಿಂದಾಗಿ ಒಬ್ಬ ಮುಗ್ಧ ಹುಡುಗಿಯ ಬದುಕು ಹಾಳು ಮಾಡಬಾರದು ಎಂದು ನಿರ್ಧರಿಸಿ ಅಪ್ಪ-ಅಮ್ಮನಿಗೆ ತಾನು ಹೆಣ್ಣನ್ನು ಮದುವೆಯಾಗಲು ಯೋಗ್ಯನಲ್ಲ ಎಂದು ಪರೋಕ್ಷವಾಗಿ ತಿಳಿಸಿದ್ದ. ಅವನ ನಿರಾಕರಣೆಯಿಂದ ಅಪ್ಪ-ಅಮ್ಮ ಸಿಟ್ಟಿಗೆದ್ದಿದ್ದರು. 'ನೀನು ಮದುವೆಯಾಗದಿದ್ದರೆ ನಾವಿಬ್ಬರೂ ತಕ್ಷಣ ಆತ್ಮಹತ್ಯೆ ಮಾಡಿಕೊಳ್ಳುತ್ತೇವೆ. ಸಮಾಜದಲ್ಲಿ ನಮ್ಮ ಮರ್ಯಾದೆಯ ಗತಿಯೇನು? ಇಷ್ಟು ದಿನ ನಿನ್ನ ಬೆಳೆಸಿದ್ದಕ್ಕೆ ನೀನು ಕೊಡುತ್ತಿರುವ ಪ್ರತಿಫಲ ಇದೇನಾ?' ಎಂದೆಲ್ಲಾ ಬೆದರಿಸಿದ್ದರು. ಈ 'ಎಮೋಷನಲ್ ಬ್ಲಾಕ್‌ಮೇಲ್'ಗೆ ಹುಡುಗ ಕಂಗಾಲಾಗಿ ನನ್ನ ಬಳಿ ಬಂದಿದ್ದ. ಅಪ್ಪ-ಅಮ್ಮನನ್ನು ಅತ್ಯಂತ ಪ್ರೀತಿಸುವ ಈ ಹುಡುಗನಿಗೆ ಸಹಜವಾಗಿಯೇ ತನ್ನ ಕಾರಣಕ್ಕಾಗಿ ತಂದೆ-ತಾಯಿಗಳು ಜೀವ ಕಳೆದುಕೊಳ್ಳುವ ಸಂಗತಿ ದುಃಖ ತಂದಿತ್ತು. ನಾನು ಎಲ್ಲಾ ವಿವರಗಳನ್ನು ತಿಳಿದುಕೊಂಡ ನಂತರ ಒಂದು ಪ್ರಶ್ನೆ ಕೇಳಿದೆ.

'ನೀನು ನಿನ್ನ ತಂದೆ-ತಾಯಿಯರನ್ನು ಪ್ರೀತಿಸಿದಷ್ಟೇ ಗಾಢವಾಗಿ ಅವರು ನಿನ್ನನ್ನು ಪ್ರೀತಿಸುತ್ತಾರೆಯೆ?' 'ಖಂಡಿತಾ ಸಾರ್. ಅವರ ಜೀವಕ್ಕಿಂತಲೂ